# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ
# ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ
# ಮೇಲಿನ
# ಅನುಪಾಲನಾ ಲೆಕ್ಕಪರಿಶೋಧನೆ

## ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**

***2022ನೇ ವರ್ಷದ ವರದಿ ಸಂಖ್ಯೆ: 3***

# ಪರಿವಿಡಿ


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | vii |
| ಸ್ಥೂಲನೋಟ | | ix - xv |
| **ಭಾಗ–I** | | |
| **ಅಧ್ಯಾಯ–I** | | |
| ಪೀಠಿಕೆ | 1.1 | 1 |
| ಆಯವ್ಯಯ ಚಿತ್ರಣ | 1.2 | 1 |
| ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ | 1.3 | 2 |
| ನಿರಂತರ ಉಳಿತಾಯಗಳು | 1.4 | 2 |
| ಭಾರತ ಸರ್ಕಾರದಿಂದ ಸಹಾಯಾನುದಾನಗಳು | 1.5 | 2 |
| ಲೆಕ್ಕಪರಿಶೋಧನೆ ನಡೆಸಲು ಅಧಿಕಾರ | 1.6 | 2-3 |
| ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II), ಕರ್ನಾಟಕ, ಬೆಂಗಳೂರು ಇವರ ಕಛೇರಿಯ ಸಾಂಸ್ಥಿಕ ರಚನೆ | 1.7 | 3 |
| ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ | 1.8 | 3-4 |
| ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ | 1.9 | 4 |
| ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ | 1.10.1 | 4-5 |
| ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮಗಳು | 1.10.2 | 5 |
| ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು | 1.10.3 | 5 |
| ರಾಜ್ಯ ಶಾಸಕಾಂಗದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 1.11 | 6 |
| ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು | 1.12 | 6 |
| **ಅಧ್ಯಾಯ–II** | | |
| **ಇಲಾಖೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು** | | |
| **ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ** | 2.1 | 7 |
| *ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ನೀತಿಗಳ ತೊಡಗುವಿಕೆ (ಇನಿಷಿಯೇಟಿವ್)ಗಳ ಅನುಷ್ಠಾನ* | | 7-34 |
| **ನಗರಾಭಿವೃದ್ಧಿ ಇಲಾಖೆ** | 2.2 | 35 |
| *ಬೆಂಗಳೂರು ನಗರ ಪ್ರದೇಶದಲ್ಲಿ ಭೂಗತ ಉಪಯುಕ್ತತೆಗಳ ಮ್ಯಾಪಿಂಗ್ ಮತ್ತು ಕಾರ್ಯಗತಗೊಳಿಸುವಿಕೆ* | | 35-49 |
| **ಲೋಕೋಪಯೋಗಿ ಇಲಾಖೆ** | | 49 |
| *ನಿಷ್ಕ್ರಿಯವಾಗಿಡಲಾಗಿದ್ದ ಗುಣಮಟ್ಟ ಖಾತ್ರಿ ಉಪಕರಣ* | 2.3 | 49-52 |
| *ತಪ್ಪಿಸಬಹುದಾಗಿದ್ದ ವೆಚ್ಚ* | 2.4 | 52-54 |
| *ಇಲಾಖೆಯ ತಪ್ಪುಗಳ ಕಾರಣದಿಂದ ಪರಿಹಾರದ ಪಾವತಿ* | 2.5 | 55-57 |
| *ಸ್ವೀಕಾರಾರ್ಹವಲ್ಲದ ಪಾವತಿ* | 2.6 | 57-59 |

| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| *ಅಕ್ರಮ ಪಾವತಿಗಳು* | 2.7 | 59-61 |
| **ನಗರಾಭಿವೃದ್ಧಿ ಇಲಾಖೆ**<br>**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ** | | 61 |
| *ಭೂ ಪರಿಹಾರ ಪಾವತಿಯಲ್ಲಿನ ವಿಳಂಬದಿಂದ ಭಾರಿ ಆರ್ಥಿಕ ಹೊರೆ* | 2.8 | 61 - 63 |
| *ಶಂಕಿತ ನಕಲಿ ದಾಖಲೆಗಳ ಆಧಾರದ ಮೇಲೆ ಸಂಪೂರ್ಣ ಕ್ರಯಪತ್ರವನ್ನು ಕಾರ್ಯಗತಗೊಳಿಸುವುದು* | 2.9 | 64-68 |
| *ಸೇವಾ ತೆರಿಗೆ ಪಾವತಿಗೆ ಶಾಸನಬದ್ಧ ನಿಬಂಧನೆಗಳನ್ನು ಪಾಲಿಸದಿರುವ ಕಾರಣ ತಪ್ಪಿಸಬಹುದಾಗಿದ್ದ ಆರ್ಥಿಕ ಹೊರೆ* | 2.10 | 68-70 |
| *ಸೇವಾ ತೆರಿಗೆಯ ಮರುಪಾವತಿಯ ಮೇಲೆ ಗುತ್ತಿಗೆದಾರನಿಗೆ ಅನುಚಿತ ಲಾಭ* | 2.11 | 70-71 |
| *ವ್ಯತ್ಯಾಸದ ಅಂಶವನ್ನು ಕಾರ್ಯಗತಗೊಳಿಸುವಿಕೆಯಿಂದ ಗುತ್ತಿಗೆದಾರನಿಗೆ ಅನಪೇಕ್ಷಿತ ಲಾಭ* | 2.12 | 71-72 |
| **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** | | 73 |
| *ಒಳಚರಂಡಿ ಕಾಮಗಾರಿಗಳ ಅಸಮರ್ಪಕ ಯೋಜನೆ ಮತ್ತು ಕಾರ್ಯನಿರ್ವಹಣೆ* | 2.13 | 73-77 |
| *ಸಂಹಿತೆಯ ನಿಬಂಧನೆಗಳನ್ನು ಅನುಸರಿಸದ ಕಾರಣ ₹ 1.61 ಕೋಟಿ ನಷ್ಟ* | 2.14 | 78-80 |
| **ವಸತಿ ಇಲಾಖೆ** | | 80 |
| *ಪ್ರಾರಂಭವಾಗದ ಮತ್ತು ನಿಧಾನಗತಿಯ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಕ್ರೋಢೀಕರಣ ಮುಂಗಡಗಳನ್ನು ವಸೂಲಿ ಮಾಡದ ಕಾರಣ ಗುತ್ತಿಗೆದಾರರಿಗೆ ಅನಗತ್ಯ ಲಾಭ* | 2.15 | 80-82 |
| **ಗೃಹ ಇಲಾಖೆ** | | |
| *ಸರ್ಕಾರೀ ಹಣದ ದುರುಪಯೋಗ* | 2.16 | 82-83 |
| **ಭಾಗ–II** | | |
| **ಅಧ್ಯಾಯ–I** | | |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ** | | |
| ಸಾಮಾನ್ಯ | 1.1 - 1.2 | 85-86 |
| ಉತ್ತರದಾಯಿತ್ವದ ಚೌಕಟ್ಟು | 1.3 - 1.4 | 86-87 |
| ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ | 1.5 - 1.6 | 87-88 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳು | 1.7-1.9 | 88-90 |
| ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ | 1.10-1.12 | 91-92 |
| ಇತ್ತೀಚಿನ ಅಂತಿಮರೂಪಕ್ಕೆ ತರಲಾಗಿರುವ ಲೆಕ್ಕಪತ್ರಗಳ ಅನುಸಾರ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆ | 1.13 | 92-94 |

| ವಿವರಗಳು | | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| ಈ ವರದಿಯ ವ್ಯಾಪ್ತಿ | | 1.14 | 94 |
| ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ | | 1.15 | 94 |
| ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳು | | 1.16-1.18 | 94-96 |
| ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ | | 1.19 | 96 |
| **ಅಧ್ಯಾಯ – II** | | | |
| **ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು** | | | |
| **ಕರ್ನಾಟಕ ವಿದ್ಯುತ್ ನಿಗಮ ನಿಯಮಿತ** | | | **97** |
| *ಉದ್ದೇಶಿತ ಗುರಿಯನ್ನು ಸಾಧಿಸದಿರುವುದು* | | 2.1 | 97-100 |
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | | | 100 |
| *ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಟೆಂಡರಿನಲ್ಲಿ ಪೂರ್ವಾರ್ಹತಾ ಮಾನದಂಡಗಳ ತಿದ್ದುಪಡಿ ಮಾಡಿದ್ದುದು* | | 2.2 | 100-102 |
| **ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್** | | | 103 |
| *ಕರ್ನಾಟಕ ಭವನದ ನಿರ್ಮಾಣ – ನಿಷ್ಫಲ ಹೂಡಿಕೆ ಹಾಗೂ ವರಮಾನದ ನಷ್ಟ* | | 2.3 | 103-106 |
| *ನಿಷ್ಫಲ ವೆಚ್ಚ* | | 2.4 | 106-110 |
| **ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್** | | | 111 |
| *ಹೆಚ್ಚುವರಿ ವೆಚ್ಚ* | | 2.5 | 111-113 |
| **ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | | | 114 |
| *ಗುತ್ತಿಗೆದಾರರಿಗೆ ಮಾಡಿದ ಅನರ್ಹ ಸಹಾಯ* | | 2.6 | 114-115 |
| **ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ** | | | 116 |
| *ಗುತ್ತಿಗೆದಾರರುಗಳಿಗೆ ಅನರ್ಹ ಸಹಾಯವನ್ನು ಮಾಡಿಕೊಟ್ಟಿದ್ದುದು* | | 2.7 | 116-119 |
| *ಸಂಖ್ಯೆ:* | **ಅನುಬಂಧ** | | |
| **ಭಾಗ–Iರ ಅಧ್ಯಾಯ – I** | | | |
| 1 | ಸತತ ಉಳಿತಾಯಗಳನ್ನು ತೋರಿಸುವ ಅನುದಾನಗಳು | 1.4 | 121 |
| 2 | ಸಿಎಜಿರವರ (ಡಿಪಿಸಿ ಕಾಯ್ದೆ, 1971ರ ಅನುಚ್ಛೇದ 19(3) ಮತ್ತು 20(1)ರಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಸ್ವಾಯತ್ತ ಸಂಸ್ಥೆಗಳ ವಹಿಸುವಿಕೆಯ ಸಮೀಕ್ಷೆಯ ವಾರ್ಷಿಕ ಸಲ್ಲಿಕೆ | 1.7 ಮತ್ತು 1.11 | 122 |
| 3 | 31 ಮಾರ್ಚ್ 2020ರವರೆಗೆ ಜಾರಿ ಮಾಡಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ಬಾಕಿಯ ವರ್ಷಾವಾರು ವಿವರಗಳು | 1.10.1 | 123 |
| 4 | 31 ಡಿಸೆಂಬರ್ 2021ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು (ಸಾಮಾನ್ಯ ಮತ್ತು | 1.10.2 | 124 |

| | ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| | ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | | |
| 5 | ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಬೇಕಿರುವ ಕಂಡಿಕೆಗಳು | 1.10.3 | 125 |
| | **ಭಾಗ–Iರ ಅಧ್ಯಾಯ – II** | | |
| 6 | ನೀತಿಗಳ ಸಂಕ್ಷಿಪ್ತತೆ | 2.1.1 | 126 |
| 7 | ತೊಡಗುವಿಕೆಗಳು ಮತ್ತು ಅವುಗಳ ಪ್ರಗತಿಯ ಪಟ್ಟಿಯನ್ನು ತೋರಿಸುವ ಕೋಷ್ಟಕ | 2.1.4 | 127 - 128 |
| 8 | ಮಾರ್ಚ್ 2020ರ ಅಂತ್ಯದಲ್ಲಿದ್ದಂತೆ ಕಿಟ್ಸ್ ನಿಂದ ಬಳಕೆಯ ಪ್ರಮಾಣಪತ್ರಗಳಿಲ್ಲದೆ ಖರ್ಚಾಗದೆ ಉಳಿದ ಬಾಕಿಗಳ ವಿವರಗಳನ್ನು ತೋರಿಸುವ ಪಟ್ಟಿ | 2.1.5 | 129 |
| 8 A | ಕಿಯೋನಿಕ್ಸ್‌ಗೆ ಬಿಡುಗಡೆಗೊಳಿಸಿದ ಅನುದಾನಗಳ ಮತ್ತು ಬಾಕಿ ಇರುವ ಬಳಕೆಯ ಪ್ರಮಾಣಪತ್ರಗಳ ವಿವರಗಳನ್ನು ತೋರಿಸುವ ಪಟ್ಟಿ | 2.1.5 | 129 |
| 9 | ಗ್ರ್ಯಾಂಡ್ ಚಾಲೆಂಜ್‌ನಲ್ಲಿ ಕರೆ–ವಾರು ಸ್ಥಿತಿಯನ್ನು ತೋರಿಸುವ ಪಟ್ಟಿ | 2.1.9 | 130 - 132 |
| 10 | ಬಿಡಬ್ಲ್ಯುಎಸ್‌ಎಸ್‌ಬಿಯ ಜಿಐಎಸ್ ದತ್ತಾಂಶದಲ್ಲಿ ವ್ಯತ್ಯಾಸಗಳನ್ನು ತೋರುವ ಕೋಷ್ಟಕ | 2.2.7.2 | 133 |
| 11 A | ವಿನ್ಯಾಸದ ಸಂಚಾರ 1.5 ಎಮ್‌ಎಸ್‌ಎ ಗಿಂತ ಕಡಿಮೆಯಿದ್ದರೂ ಅನಗತ್ಯ ಬಿಎಮ್ ಮತ್ತು ಎಸ್‌ಡಿಬಿಸಿ ಪದರಗಳು | 2.4.2 | 134 |
| 11 B | ಎಮ್‌ಎಸ್‌ಎ ಯನ್ನು ಹೆಚ್ಚಾಗಿ ಲೆಕ್ಕಹಾಕಿ ಮತ್ತು ವಿಡಿಎಫ್ ಅನ್ನು ಅಧಿಕವಾಗಿ ಅಳವಡಿಸಿ ಅನಗತ್ಯ ಬಿಎಮ್ ಮತ್ತು ಎಸ್‌ಡಿಬಿಸಿ | 2.4.2 | 135 |
| 11 C | ಎಮ್‌ಎಸ್‌ಎ ಯನ್ನು ಹೆಚ್ಚಾಗಿ ಲೆಕ್ಕಹಾಕಿ ಮತ್ತು ಎಲ್‌ಡಿಎಫ್ ಅನ್ನು ಅಧಿಕವಾಗಿ ಅಳವಡಿಸಿ ಅನಗತ್ಯ ಬಿಎಮ್ ಮತ್ತು ಎಸ್‌ಡಿಬಿಸಿ | 2.4.2 | 136 |
| 12 | ಕೆಪಿಡಬ್ಲ್ಯುಡಿ/ಕೆಪಿಡಬ್ಲ್ಯುಎ/ಕೆಎಫ್‌ಸಿ ಸಂಹಿತೆಗಳಲ್ಲಿ ನಿರ್ದಿಷ್ಟಪಡಿಸಿರುವ ಪರಿಶೀಲನಾ ಅಳತೆಯ ಕ್ರಮಗಳು (ಚೆಕ್ ಮೆಶರ್ಸ್) | 2.7 | 137 |
| 13 A | ಒಂದೇ ಇಎಮ್‌ಬಿಯನ್ನು ಉಲ್ಲೇಖಿಸಿ ಒಂದೇ ಗುತ್ತಿಗೆದಾರನಿಗೆ ಎರಡು ಬಾರಿ ಪಾವತಿ | 2.7 | 138 |
| 13 B | ವಿಭಿನ್ನ ಎಮ್‌ಬಿ/ಇಎಮ್‌ಬಿಗಳನ್ನು ಉಲ್ಲೇಖಿಸಿ ಒಂದೇ ಗುತ್ತಿಗೆದಾರನಿಗೆ ಎರಡು ಬಾರಿ ಪಾವತಿ | 2.7 | 139 - 140 |
| 13 C | ಒಂದೇ ಕಾಮಗಾರಿ ಇಂಡೆಂಟ್ ಮತ್ತು ಕರಾರಿಗೆ ಎರಡು ಗುತ್ತಿಗೆದಾರರಿಗೆ ಪಾವತಿ | 2.7 | 141 |
| 14 | ನಕಲಿ ದಾಖಲೆಗಳ ಮೇಲೆ ಸಂಪೂರ್ಣ ಕ್ರಯಪತ್ರಗಳ ಕಾರ್ಯಗತಗೊಳಿಸಿರುವುದನ್ನು ತೋರಿಸುವ ಕೋಷ್ಟಕ | 2.9 | 142 - 146 |
| 15 | ಮಾರ್ಚ್ 2021ರಲ್ಲಿದ್ದಂತೆ ಒಳಚರಂಡಿ ಯೋಜನೆಗಳು ಪೂರ್ಣಗೊಳ್ಳುವುದಕ್ಕೆ ನಿಗದಿಪಡಿಸಿದ ಅವಧಿ ಮತ್ತು ಭರಿಸಿದ ವೆಚ್ಚವನ್ನು ತೋರಿಸುವ | 2.13.1 | 147 |

| | ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| | ಕೋಷ್ಟಕ | | |
| 16 | 31 ಮಾರ್ಚ್ 2021ರಲ್ಲಿದ್ದಂತೆ ಕೈಗೆತ್ತಿಕೊಂಡ ಒಳಚರಂಡಿ ಕಾಮಗಾರಿಗಳ ವಿವರಗಳು ಮತ್ತು ಅವುಗಳ ಸ್ಥಿತಿ | 2.13.5 | 148 |
| 17 | ನಗರ ಸ್ಥಳೀಯ ಸಂಸ್ಥೆಗಳಿಂದ ಕೊಳಚೆನೀರಿನ ಉತ್ಪಾದನೆ ಮತ್ತು ವಿಲೇವಾರಿಯ ವಿವರಗಳನ್ನು ತೋರಿಸುವ ತ:ಖ್ತೆ | 2.13.6 | 149 |
| 18 | ಎಸ್‌ಟಿಪಿಗಳನ್ನು ಪೂರ್ಣಗೊಳಿಸದ ಪ್ರಕರಣಗಳಲ್ಲಿ ಜಂಟಿ ಭೌತಿಕ ಪರಿಶೀಲನೆಯ ಫಲಿತಾಂಶಗಳು | 2.13.6 | 150 - 151 |
| 19 | ಕ್ರೋಢೀಕರಣ ಮುಂಗಡಗಳನ್ನು ವಸೂಲು ಮಾಡುವಲ್ಲಿನ ಕಳಪೆ ಪ್ರಗತಿಯನ್ನು ತೋರಿಸುವ ಕೋಷ್ಟಕ | 2.15 | 152 - 153 |
| **ಭಾಗ–IIರ ಅಧ್ಯಾಯ – I** | | | |
| 20 | ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 1.1 | 154 - 157 |
| 21 | ಇಲಾಖಾವಾರು ಬಾಕಿಯಿರುವ ಪರೀಕ್ಷಣಾ ವರದಿಗಳನ್ನು ತೋರಿಸುವ ತಃಖ್ತೆ | 1.19 | 158 |

# ಮುನ್ನುಡಿ

31 ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಸಂವಿಧಾನದ 151 (2) ನೇ ವಿಧಿಯ ಅಡಿಯಲ್ಲಿ ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸುವ ಸಲುವಾಗಿ ತಯಾರಿಸಲಾಗಿದೆ .

ಈ ವರದಿಯು ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷಕ್ಕೆ ಸರ್ಕಾರಿ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯು ಎರಡು ಭಾಗಗಳನ್ನು ಒಳಗೊಂಡಿದೆ. ವರದಿಯ ಭಾಗ–I ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ, ವಸತಿ ಇಲಾಖೆ ಮತ್ತು ಗೃಹ ಇಲಾಖೆಗೆ ಸಂಬಂಧಿಸಿದ 16 ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿದೆ. ವರದಿಯ ಭಾಗ–II ಇಂಧನ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿ ಬರುವ ಆರು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಏಳು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿದೆ.

ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳನ್ನು (ಕಂಪನಿಗಳ ಅಧಿನಿಯಮದ ಅನುವುಗಳ ಅನುಸಾರ ಸರ್ಕಾರಿ ಕಂಪನಿಗಳು ಎಂಬುದಾಗಿ ಭಾವಿಸಲಾಗಿರುವ ಕಂಪನಿಗಳನ್ನೂ ಒಳಗೊಂಡಂತೆ) ಕಂಪನಿಗಳ ಅಧಿನಿಯಮ 1956ರ ಪರಿಚ್ಛೇದ 619 ಹಾಗೂ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 139 ಮತ್ತು 143ರ ಅನುವುಗಳ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯನ್ನು ನಡೆಸುವರು. ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್ಸ್) ಪ್ರಮಾಣೀಕರಿಸುವಂತಹ ಲೆಕ್ಕಪತ್ರಗಳು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅಧಿಕಾರಿಗಳಿಂದ ಪೂರಕ ಲೆಕ್ಕಪರಿಶೋಧನೆಯ ಷರತ್ತಿಗೆ ಒಳಪಟ್ಟಿರುತ್ತವೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಟೀಕೆಟಿಪ್ಪಣಿಗಳನ್ನು ನೀಡುವರು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳಿಗೆ ಪೂರಕ ವರದಿಗಳನ್ನು ನೀಡುವರು. ಅಲ್ಲದೆಯೇ, ಈ ಕಂಪನಿಗಳು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರೀಕ್ಷಾ–ಪರಿಶೀಲನೆಗೂ ಸಹ ಒಳಪಡುತ್ತವೆ.

ಸರ್ಕಾರಿ ಕಂಪನಿ ಅಥವಾ ನಿಗಮದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ವರದಿಗಳನ್ನು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1971ರ ಪರಿಚ್ಛೇದ 19ಎ – ಇದರ ಅನುವುಗಳ ಅಡಿಯಲ್ಲಿ ಕರ್ನಾಟಕದ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸರ್ಕಾರಕ್ಕೆ ಸಲ್ಲಿಸುವರು.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2019–20ರ ಅವಧಿಗೆ ನಡೆಸಲಾದ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ ಗಮನಿಸಲಾದ ಹಾಗೂ ಈ ಹಿಂದಿನ ಸಾಲುಗಳಲ್ಲಿ ಗಮನಿಸಿದ, ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವು ಸಹ ಆಗಿರುತ್ತವೆ. 2019–20ಕ್ಕೆ ತದನಂತರದ ಅವಧಿಗೆ ಸಂಬಂಧಿತ ವಿಷಯಗಳನ್ನು ಕೂಡ ಅಗತ್ಯವಿದೆ ಎಂಬುದಾಗಿ ಭಾವಿಸಿರುವ ಕಡೆಗಳಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಕನ್ನಡ ಭಾಷಾಂತರ ಆವೃತ್ತಿಯ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.